# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1432 |
| ಉತ್ತರಿಸುವ ದಿನಾಂಕ | : 28.02.2018 |
| ಸದಸ್ಯರ ಹೆಸರು | : ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು. |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಗ್ರಾಮೀಣ ಯುವ ಜನತೆ ಆರೋಗ್ಯಕರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ನಿರ್ಮಿಸಲು "ಯುವ ಚೈತನ್ಯ ಯೋಜನೆಯನ್ನು ಆರಂಭಿಸಲಾಗಿದೆಯೇ; | ಹೌದು |
| ಆ | ಈ ಯೋಜನೆಯ ರೂಪುರೇಷೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸುವುದು; | "ಯುವ ಚೈತನ್ಯ" ಯೋಜನೆಯು ರಾಜ್ಯಾದ್ಯಂತ ಯುವಜನರನ್ನು ಸಂಘಟಿಸಿ, ಸಕ್ರೀಯರನ್ನಾಗಿಸಲು ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸುವ ಉದ್ದೇಶವನ್ನು ಹೊಂದಿದೆ. ಒಂದು ಯುವ ಸಂಘಕ್ಕೆ ತಲಾ ರೂ.40,000/- ಘಟಕ ವೆಚ್ಚದಲ್ಲಿ ಕ್ರೀಡಾ ಚಟುವಟಿಕೆ ಆಯೋಜಿಸಲು ಹಾಗೂ ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ಕ್ರೀಡಾ ಸಲಕರಣೆಗಳನ್ನು ಒದಗಿಸಲಾಗುತ್ತಿದೆ. ಸದರಿ ಯೋಜನೆಯ ಫಲಾನುಭವಿಗಳಾಗಲೂ ಯುವ ಸಂಘಗಳನ್ನು ಕೆಳಕಾಣಿಸಿದ. ಮಾರ್ಗ ಸೂಚಿಯನ್ವಯ ಗುರುತಿಸಲಾಗುತ್ತಿದೆ.<br>1. ಯುವ ಸಂಘವು ಕನಿಷ್ಟ 25 ಯುವಜನರನ್ನು ಸದಸ್ಯರನ್ನಾಗಿ ಹೊಂದಿರಬೇಕು.<br>2. ಎಲ್ಲಾ ಸದಸ್ಯರ ವಯೋಮಿತಿಯು 18 ರಿಂದ 35 ವರ್ಷದೊಳಗಿರಬೇಕು.<br>3. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮಾನ್ಯತೆ ಪಡೆದಿರಬೇಕು.<br>4. ಯುವ ಸಂಘಗಳು ಇಲಾಖೆಯಿಂದ ಮಾನ್ಯತೆ ಪಡೆಯಲು ಸಂಘಗಳ ನೋಂದಣಿ ಕಾಯ್ದೆಯಡಿ ನೋಂದಣಿ ಕಡ್ಡಾಯವಾಗಿರುವುದಿಲ್ಲ.<br>5. ಯುವ ಸಂಘವು ಕಡ್ಡಾಯವಾಗಿ ಕ್ರಿಯಾ ಶೀಲವಾಗಿರಬೇಕು.<br>2017-18ನೇ ಸಾಲಿನಲ್ಲಿ ರಾಜ್ಯದಾದ್ಯಂತ ಒಟ್ಟು 5000 ಯುವ ಸಂಘಗಳಿಗೆ "ಯುವ ಚೈತನ್ಯ" ಕ್ರೀಡಾ ಕಿಟ್‌ಗಳನ್ನು ವಿತರಿಸಲಾಗಿದೆ. |
| ಇ | ಈ ಯೋಜನೆ ಅಡಿಯಲ್ಲಿ ಪ್ರತಿ ಘಟಕಕ್ಕೆ ಎಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ; | ಈ ಯೋಜನೆಯಡಿಯಲ್ಲಿ ಪ್ರತಿ ಘಟಕ ವೆಚ್ಚವಾಗಿ ರೂ.40.000/-ಗಳನ್ನು ಹಂಚಿಕೆ ಮಾಡಲಾಗಿದೆ. |
| ಈ | ಈವರೆಗೆ "ಯುವ ಚೈತನ್ಯ" ಯೋಜನೆಯ ಫಲವನ್ನು ಎಷ್ಟು ಕ್ರೀಡಾಪಟುಗಳು ಪಡೆದಿದ್ದಾರೆ? (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 5000 ಯುವ ಸಂಘಗಳು ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಯುಸೇಇ 47 ಯುಸೇಭಾ 2018.

(ಪ್ರಮೋದ್ ಮಧ್ವರಾಜ್)
ಮೀನುಗಾರಿಕೆ, ಯುವ ಸಬಲೀಕರಣ
ಹಾಗೂ ಕ್ರೀಡಾ ಸಚಿವರು.

ಅನುಬಂಧ-1

'ಯುವ ಚೈತನ್ಯ' ಯೋಜನೆಯಡಿ ಯುವ ಸಂಘಗಳಿಗೆ ಕ್ರೀಡಾ ಕಿಟ್‌ಗಳನ್ನು ವಿತರಿಸಿರುವ ವಿವರ

| ಕ್ರ. ಸಂ. | ಜಿಲ್ಲೆ | ಫಲಾನುಭವಿ ಯುವ ಸಂಘಗಳ ~~ವಿವರ~~ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 98 |
| 2 | ಬೆಂಗಳೂರು ಗ್ರಾಮಾಂತರ | 153 |
| 3 | ರಾಮನಗರ | 377 |
| 4 | ಕೋಲಾರ | 119 |
| 5 | ಚಿಕ್ಕಬಳ್ಳಾಪುರ | 62 |
| 6 | ತುಮಕೂರು | 125 |
| 7 | ಶಿವಮೊಗ್ಗ | 125 |
| 8 | ಚಿತ್ರದುರ್ಗ | 65 |
| 9 | ದಾವಣಗೆರೆ | 100 |
| 10 | ಕಲ್ಬುರ್ಗಿ | 172 |
| 11 | ಬಳ್ಳಾರಿ | 175 |
| 12 | ರಾಯಚೂರು | 168 |
| 13 | ಬೀದರ್ | 164 |
| 14 | ಕೊಪ್ಪಳ | 127 |
| 15 | ಯಾದಗಿರಿ | 75 |
| 16 | ಮೈಸೂರು | 164 |
| 17 | ಮಂಡ್ಯ | 89 |
| 18 | ಚಾಮರಾಜನಗರ | 94 |
| 19 | ಚಿಕ್ಕಮಗಳೂರು | 155 |
| 20 | ಹಾಸನ | 100 |
| 21 | ದಕ್ಷಿಣ ಕನ್ನಡ | 126 |
| 22 | ಉಡುಪಿ | 1045 |
| 23 | ಕೊಡಗು | 106 |
| 24 | ಬೆಳಗಾವಿ | 159 |
| 25 | ಉತ್ತರ ಕನ್ನಡ | 275 |
| 26 | ವಿಜಯಪುರ | 100 |
| 27 | ಧಾರವಾಡ | 175 |
| 28 | ಬಾಲಗಕೋಟೆ | 69 |
| 29 | ಗದಗ | 113 |
| 30 | ಹಾವೇರಿ | 125 |
| | ಒಟ್ಟು | 5000 |